ದೋಣಿ ಒದಗಿಸುವುದು

568 (193) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನ ಜಂಬಗಿ (ಕೆಟಿ), ಟಕ್ಕಳಕಿ ಹಾಗೂ ಮೈಗೂರ ಮುಂತಾದ ಗ್ರಾಮಗಳಿಗೆ ಕೃಷ್ಣಾ ನದಿಯ 519.6 ಮೀ. ಹಿನ್ನೀರಿನಿಂದ ಆಗುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ನದಿ ದಾಟಲು ಇವರಿಗೆ ಯಂತ್ರ ಸಹಿತ ದೋಣಿ ಒದಗಿಸುವುದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಆದಷ್ಟು ಬೇಗ ದೋಣಿ ಒದಗಿಸುವುದೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ಮತ್ತು ಇ) ಕೃಷ್ಣಾ ಮೇಲ್ದಂಡೆ ಯೋಜನೆಯ ಪುನರ್ ನಿರ್ಮಾಣ ನಿಯಮಾವಳಿಯಲ್ಲಿ ನಾವೆಗಳನ್ನು ಖರೀದಿಸಲು ಅವಕಾಶವಿಲ್ಲ ದಿದ್ದರೂ ಸಹಾ ಗ್ರಾಮಸ್ಥರ ಮನವಿಯ ಮೇರೆಗೆ (32x12x3') ಒಟ್ಟು 60 ಜನರ ಸಾಮರ್ಥ್ಯವುಳ್ಳ 3 ಹಾಗೂ (25x8x3') 30 ಜನರ ಸಾಮರ್ಥ್ಯವುಳ್ಳ 2 ನಾವೆಗಳನ್ನು ಖರೀದಿಸಲು ರೂ.29.50 ಲಕ್ಷಗಳಿಗೆ ಈಗಾಗಲೇ ಅನುಮೋದನೆಯನ್ನು ನೀಡಲಾಗಿದೆ. ಸದರಿ ನಾವೆಗಳನ್ನು ಖರೀದಿಸಲು ಇ–ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ, ಶೀಘ್ರದಲ್ಲೇ ಖರೀದಿಸಲಾಗುವುದು.

ಮುಳವಾಡ ಏತ ನೀರಾವರಿ

582 (786) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2012–13ನೇ ಸಾಲಿನಲ್ಲಿ ಮುಳವಾಡ ಏತ ನೀರಾವರಿ ಯೋಜನೆಯ ನಿರ್ವಹಣೆ ಮತ್ತು ಪಾಲನೆ ಪೋಷಣೆಗಾಗಿ ಕೈಗೊಂಡ ಹೊಸ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು; ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳು ಯಾವುದು;